# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 06 ಫ್ರಾ.ಸಾ. : 30**

ಸಾಕ್ಷಿಯ ಹೆಸರು : ಬಾಲರಾಜ ಷಣ್ಮುಖ ಹರಿಜನ
ತಂದೆಯ ಹೆಸರು : ಷಣ್ಮುಖ ಹರಿಜನ
ವಯಸ್ಸು : 60 ವರ್ಷ
ಕೆಲಸ : ಕೂಲಿ ಕೆಲಸ
ವಾಸ : ಕದ್ರಾ, ಕಾರವಾರ

**ದಿನಾಂಕಃ 02-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 15-02-2014 ರಂದು ಕದ್ರಾ ಪೊಲೀಸರು ನನ್ನನ್ನು ಮೃತೆ ಅಶ್ವಿನಿಯ ಶವ ಪಂಚನಾಮೆಗಾಗಿ ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದಿರುತ್ತಾರೆ. ಅದರಂತೆ ನಾನು ಕಾರವಾರದ ಸಿವಿಲ್ ಆಸ್ಪತ್ರೆಗೆ ಬಂದಾಗ, ಅಲ್ಲಿ ಪೊಲೀಸರು ನನ್ನನ್ನು ಆಸ್ಪತ್ರೆಯ ಶವಗಾರದ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ ಆಸ್ಪತ್ರೆಯ ಶವಗಾರದ ನೆಲದ ಮೇಲೆ ಅಶ್ವಿನಿಯ ಶವವನ್ನು ಇಡಲಾಗಿತ್ತು. ಸದರಿ ಶವದ ಮೈ ಮೇಲೆ ಫ್ರಾಕ್, ಒಳ ಫ್ರಾಕ್, ಹಾಪ್ ಪ್ಯಾಂಟ್ (ಚಡ್ಡಿ) ಇದ್ದವು. ಶವದ ಕುತ್ತಿಗೆಯ ಎಡಬದಿಯಲ್ಲಿ ಗಲ್ಲದಿಂದ ಹಿಂಬದಿಯ ವರೆಗೆ ಕಡಿದ ಗಾಯವಾಗಿ ಮೂಳೆ ಕಾಣುತ್ತಿತ್ತು, ಮುಖದ ತುಂಬೆಲ್ಲಾ ರಕ್ತವಾಗಿತ್ತು, ಎಡ ಮುಂಗೈ ಗಂಟಿನ ಹತ್ತಿರ ಕತ್ತಿಯಿಂದ ಕಡಿದಿದ್ದು, ನೇತಾಡುತ್ತಿತ್ತು. ಅಲ್ಲಿ ಪೊಲೀಸರು ಮದ್ಯಾಹ್ನ 11-00 ರಿಂದ 01-00 ಗಂಟೆಯ ವರೆಗೆ ನನ್ನ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿದರು ಹಾಗೂ ನನ್ನ ಎಡಗೈ ಹೆಬ್ಬಟ್ಟಿನ ಗುರುತನ್ನು ಪಡೆದುಕೊಂಡರು. ಆ ಸಮಯದಲ್ಲಿ ಚಾಸಾ-8 ಹಾಗೂ ಇನ್ನೂ ಮೂರು ಜನರು ಇದ್ದರು. ಸದರಿ ಶವ ಪಂಚನಾಮೆಯನ್ನು ಈಗಾಗಲೇ ನಿಪಿ-67 ಎಂದು ಗುರುತಿಸಲಾಗಿರುತ್ತದೆ. ಶವ ಪಂಚನಾಮೆಯ ಸಮಯದಲ್ಲಿ ನಿಪಿ-57 ಮತ್ತು ನಿಪಿ-58 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ. ನಿಪಿ-57 ರಲ್ಲಿ ತಾನು ಹಾಗೂ ಅಶ್ವಿನಿಯ ಶವ ಕಾಣುತ್ತಿರುವುದಾಗಿ ಹಾಗೂ ನಿಪಿ-58 ಪೋಟೋದಲ್ಲಿ ಅಶ್ವಿನಿಯ ಶವವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಮೃತೆ

ಅಶ್ವಿನಿಯ ಶವದ ಮೈ ಮೇಲೆ ಇದ್ದ ಬಟ್ಟೆಗಳಾದ ಫ್ರಾಕ್, ಒಳ ಫ್ರಾಕ್, ಹಾಪ್ ಪ್ಯಾಂಟ್ (ಚಡ್ಡಿ) ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮುದ್ದೆ ಮಾಲು-14 ರಿಂದ 16 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ</u>**

2. ಪಂಚನಾಮೆಗೆ ನನ್ನನ್ನು ಯಾರು ಕರೆದಿರುವುದಿಲ್ಲ, ನಾನೇ ಆಸ್ಪತ್ರೆಗೆ ಬಂದಿರುತ್ತೇನೆ. ಶವಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದ ನಂತರ, ಊರಿನ ಜನರು ಶವ ಪರೀಕ್ಷೆಯ ಕಾಲಕ್ಕೆ 3-4 ಜನರು ಬೇಕು ಎಂದು ಹೇಳಿದ ಕಾರಣ, ನಾನು ಆಸ್ಪತ್ರೆಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಆಸ್ಪತ್ರೆಯ ಬಳಿ ಸುಮಾರು 50-60 ಜನರು ಸೇರಿದ್ದರು. ಅಲ್ಲಿದ್ದವರು ಪೋಟೋ ತೆಗೆಯುವ ಸಮಯದಲ್ಲಿ ನಿಂತುಕೊಳ್ಳು ಎಂದು ಹೇಳಿದ್ದಕ್ಕೆ ನಾನು ನಿಂತುಕೊಂಡಿರುತ್ತೇನೆ. ಯಾವ ಕಾರಣಕ್ಕಾಗಿ ಪೋಟೋವನ್ನು ತೆಗೆದರು ಎಂದು ನನಗೆ ಗೊತ್ತಿಲ್ಲ. ನನ್ನ ಹೆಬ್ಬಟ್ಟಿನ ಗುರುತನ್ನು ಯಾರು ಹಾಗೂ ಯಾವ ಕಾರಣಕ್ಕಾಗಿ ತೆಗೆದುಕೊಂಡು ಎಂದು ನನಗೆ ಗೊತ್ತಿಲ್ಲ. ನನ್ನ ಹೆಬ್ಬಟ್ಟಿನ ಗುರುತನ್ನು ಪಡೆದುಕೊಂಡ ದಾಖಲೆಯನ್ನು ಬರೆದಿದ್ದರೋ ಅಥವಾ ಖಾಲಿ ಇತ್ತೋ ಎಂದು ನನಗೆ ಗೊತ್ತಿಲ್ಲ. ಶವದ ಮೈ ಮೇಲೆ ಇದ್ದ ಗಾಯಗಳಿಂದ ರಕ್ತ ಹರಿದಿತ್ತು. ಅಲ್ಲಿ ಜನರು ಓಡಾಡುತ್ತಿರಲಿಲ್ಲ, ನಿಂತಿದ್ದರು ಎಂದು ನುಡಿಯುತ್ತಾರೆ. ನನ್ನ ಹೆಬ್ಬಟ್ಟಿನ ಗುರುತನ್ನು ಪಡೆದುಕೊಂಡ ದಾಖಲೆಯನ್ನು ಪೊಲೀಸರು ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಾರವಾರದ ಸಿವಿಲ್ ಆಸ್ಪತ್ರೆಗೆ ಬಂದಿರಲಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ